Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿದಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 253 | ಗುರುವಾರ 5—6—47 | ಬಿಡಿ ಪ್ರತಿ 3 ಪೈ

ಪ್ರ. ಪ್ರ. ಸಭೆ ಬೆಂ. ಜೂ ೪

ಸೈನ್ಯದಲ್ಲಿ ಮುಸ್ಲಿಂರಿಗೆ ಪ್ಯಾರಟಿ

ಆಯವ್ಯಯ ಚರ್ಚೆಯಲ್ಲಿ ಒತ್ತಾಯದ ಮಾತು

(ಸ್ವಂತ ವಿಶೇಷ ಪ್ರತಿನಿಧಿಯಿಂದ)

ಡಾ॥ ರಾಯರವರ ಅಧ್ಯಕ್ಷತೆಯಲ್ಲಿ ಈ ದಿವಸ ಸಭೆ 12 ಗಂಟೆಗೆ ಸೇರಿತು.

ಪ್ರಶ್ನೋತ್ತರಗಳು

ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಕೇಳಿದ್ದ ಪ್ರಶ್ನೆಗೆ ಸರ್ಕಾರದ ಪರವಾಗಿ ಅರ್ಥಿಕ ಕಾರ್ಯದರ್ಶಿ ಶ್ರೀ ಎನ್. ಶಾಮಣ್ಣನವರು ಉತ್ತರಕೊಡುತ್ತಾ, ಸರ್ಕಾರದವರು ಇತ್ತೀಚೆಗೆ ಸಾದರು ಮಾಡಿದ 1958 ನೆಯ ಇಸವಿಯ ಸೇಕಡಾ 3 ರಂತೆ ಬಡ್ಡಿಯುಳ್ಳ ಐದು ಕೋಟಿ ರೂಪಾಯಿಗಳ ಮೊತ್ತದ ಸಾಲ ಪತ್ರಗಳನ್ನು ಕೋರಿ 433741809 ರೂಪಾಯಿಗಳ ಮೊಬಲಿಗೆ ಅರ್ಜಿಗಳು ಬಂದಿದ್ದವು. ಅರ್ಜಿಗಳನ್ನು ಗುಜರಾಯಿಸಿದವರುಗಳ ಹೆಸರುಗಳನ್ನು ಸೂಚಿಸುವುದು ಸೂಕ್ತವಲ್ಲ. ಮೆಸರ್ಸ್ ಸ್ವಾಸ್ತಿಕ್ ಕಂಪೆನಿ ಲಕ್ಕ್ಯಾರು ಕಂಪೆನಿ, ಮತ್ತು ಮೈಸೂರು ಬ್ಯಾಂಕ್ ಇವರುಗಳೇ ಅಂಡರ್ ರೈಡರುಗಳು. ಸಾಲ ಪತ್ರಗಳ ಮೊಬಲಗು ಸರ್ಕಾರದ ನಗದು ಶಿಲ್ಕಿನ ಜೊತೆಯಲ್ಲಿ ಸೇರಿ ಹೋಗಿದೆ. ಮತ್ತು ಅದರ ಶೈಕಿ ಕೊಂಚ ಭಾಗವು ಭಾರತ ಸರ್ಕಾರದ ಸೆಕ್ಯೂರಿಟಿ ಪತ್ರಗಳನ್ನು ಕೊಂಡು ಕೊಳ್ಳುವುದರಲ್ಲಿಯೂ ಮತ್ತು ಕೊಂಚ ಭಾಗವು ಬ್ಯಾಂಕುಗಳಲ್ಲಿ ಫಿಕ್ಸ್‌ಡ್ ಡಿಪಾಜಿಟ್ ಇಡುವುದರಲ್ಲಿಯೂ ವಿನಿಯೋಗಿಸಲ್ಪಟ್ಟಿದೆ. ಈ ಮೊಬಲಿಗಿನ ಮೇಲೆ ಸಿವ್ವಳವಾಗಿ ಶೇಕಡ 2 ರಂದ 2½ ರೂ ವರೆಗೆ ಬಡ್ಡಿ ಬರುತ್ತದೆ ಎಂದರು.

ಶ್ರೀ ಜೆ. ಎಂ. ಮುಂಟೆಯ್ಯನವರು ಕೇಳಿದ ಪ್ರಶ್ನೆಗಳಿಗೆ ಸರ್ಕಾರದ ಪರವಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ವೇದವಾಸಾಚಾರ್ಯರು ಉತ್ತರ ಕೊಡುತ್ತಾ 1927 ನೇ ಇಸವಿಯಿಂದ 1947 ನೇ ಇಸವಿಯ ವರೆಗೆ ಪ್ರೊಬೇಷನರುಗಳ ಮತ್ತು ಅಸಿಸ್ಟೆಂಟ್ ಕಮಿಷನರುಗಳ ನೇಮಕವಾದ ಬಗ್ಗೆ ಬಂದ ವಿವರಗಳನ್ನು ಕೊಡಲು ಸಿದ್ಧವಿಲ್ಲ ಎಂದರು.

ಅಭಿನಂದನಾ ನಿರ್ಣಯ

'ಇಂಡಿಯಾ ದೇಶದ ರಾಜಕೀಯ ಭವಿಷ್ಯದ ಬಗ್ಗೆ ಇಂಡಿಯಾ ರಾಜಕೀಯ ಪಕ್ಷಗಳಲ್ಲಿ ಒಪ್ಪಂದವಾಗಿರುವುದನ್ನು ಸಂತೋಷಿಸಿ ಭಾರತವು ಸ್ವಾತಂತ್ರ್ಯವನ್ನು ಬೇಗನೆ ಪಡೆಯಲಿ ಎಂದು ಹಾರೈಸುತ್ತದೆ.' ಎಂಬ ನಿರ್ಣಯವನ್ನು ಶ್ರೀ ಎಂ. ಎಸ್. ಜೋಯಿಸ್ ಮತ್ತು ಶ್ರೀ ಎಸ್. ಎ. ಕೃಷ್ಣಮೂರ್ತಿ ಮಂಡಿಸಿದ್ದಾರೆ.

ವಿ॥ ನೂರ್ ಹುಸೇನ್ ಇದೇ ಅರ್ಥ ಕೊಡುವ ಮತ್ತೊಂದು ನಿರ್ಣಯ ಮಂಡಿಸಿದ್ದಾರೆ.

ಮೇ 16 ರ ಯೋಜನೆಯನ್ನು ಎತ್ತಿ ಹಿಡಿದು ದೇಶೀಯ ಸಂಸ್ಥಾನಗಳು ರಾಜ್ಯಾಂಗ ಘಟನಾ ಸಮಿತಿಗೆ ಸೇರಲು ಅನುಕೂಲವಾಗುವಂತೆ ಶ್ರಮಿಸಿದ ಬೇಟ್ಸ್‌ರವರಿಗೆ ವಂದನೆಗಳು ಎಂಬ ಅಂಶವು ನನ್ನ ನಿರ್ಣಯದಲ್ಲಿ ಸೇರಿದೆ ಎಂದು ಶ್ರೀ ಭೂಪಾಳಂ ತಿಳಿಸಿದರು.

ಈ ವಿಷಯವನ್ನು ನಾಳೆ ತೆಗೆದು ಕೊಳ್ಳೋಣ ಎಂದು ಹೇಳಿದರು.

ಹಕ್ಕುಭಾಧ್ಯತಾ ನಿರ್ಣಯ

31—5—47 ನೇ ಮಧ್ಯಾಹ್ನ 4 ಗಂಟೆಯ ವೇಳೆಯಲ್ಲಿ ಶ್ರೀ ಭೂಪಾಳಂರ ಹಕ್ಕುಭಾದ್ಯತಾ ನಿರ್ಣಯದ ಮೇಲೆ ಅಧ್ಯಕ್ಷರು ತೀರ್ಪಿತ್ತಾಗ, ಅಧ್ಯಕ್ಷರನ್ನು ಕುರಿತು ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಗುಪ್ತರು 'ನೀವು ಅಧ್ಯಕ್ಷ ಸ್ಥಾನಕ್ಕೆ ಯೋಗ್ಯರಲ್ಲ' ಎಂದು ಹೇಳಿದ್ದರ ಮೇಲೆ ಶ್ರೀ ಚಿಕ್ಕಲಿಂಗಯ್ಯನವರು ಹಕ್ಕುಭಾದ್ಯತಾ ನಿರ್ಣಯವನ್ನು ಪಂಡಿಸಿದ್ದರೆಷ್ಟೇ! ಈ ವಿಷಯ ಚರ್ಚೆ ನಡೆದು ನಾನಾ ಅಭಿಪ್ರಾಯಗಳನ್ನೊಳಗೊಂಡ ಉಜ್ವಲ ಭಾಷಣಗಳನ್ನು ಅನೇಕ ಸದಸ್ಯರುಗಳು ಮಾಡಿದನಂತರ ಬಹುಮತದಿಂದ ಈ ಹಕ್ಕುಭಾದ್ಯತಾ ನಿರ್ಣಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಹಾಕಬೇಕೆಂದು ತೀರ್ಮಾನವಾಯಿತು.

ಆಯವ್ಯಯ ಚರ್ಚೆ

ನಂತರ ಆಯವ್ಯಯ ಚರ್ಚೆ ಆರಂಭವಾಗಿ, ಸದಸ್ಯರುಗಳ ಸ್ಫೂರ್ತಿದಾಯಕ ಭಾಷಣಗಳಾಗುತ್ತಿವೆ.

ಭಾರತದ ಬಗ್ಗೆ ಬ್ರಿಟಿಷರ ಯೋಜನೆ

ವೈಸರಾಯಿ ಮತ್ತು ಮುಖಂಡರ ಹೇಳಿಕೆಗಳು

ಬ್ರಿಟಿಷರು ಭಾರತವನ್ನು ಬಿಡಲು ಯಾವಾಗಲೂ ಸಿದ್ಧ!

ಭಾರತಕ್ಕೆ ಡೊಮಿನಿಯನ್ ಸ್ಟೇಟಸ್

ವೈಸರಾಯರು ಪತ್ರಿಕಾ ಸಮ್ಮೇಳನದಲ್ಲಿ, ಭಾರತದ ಅಧಿಕಾರವನ್ನು ಜೂನ್ 1948 ಮುಂಚೆಯೇ ವರ್ಗಾಯಿಸಲಾಗುವುದೆಂದೂ, ಇದು ಯಥಾರ್ಥವಾದುದೆಂದೂ ತಿಳಿಸಿರುವರು.

ಭಾರತಕ್ಕೆ ಕ್ಷಿಪ್ರದಲ್ಲೇ ಡೊಮಿನಿಯನ್ ಸ್ಟೇಟಸ್ ಸಿಕ್ಕುವುದೆಂದಿರುವರು.

ಸಂಸ್ಥಾನಗಳು ವಿಭಜನೆಯಾದ ಭಾರತದ ಒಂದು ಕಡೆಗೆ ಸೇರುವ ಅವಶ್ಯಕತೆ ವಿವರಿಸಿದ್ದಾರೆ

ವೈಸರಾಯರ ಹೊಸ ಯೋಜನೆಯನ್ನು ಪಂ॥ ನೆಹರೂ ಒಪ್ಪಿದ್ದಾರೆ. ಜಿನ್ನರು ಅಭಿಪ್ರಾಯಕ್ಕೆ ಲೀಗ್ ಕೌನ್ಸಿಲ್ಲಿನ ಮೇಲೆ ಭಾರ ಹಾಕಿದ್ದಾರೆ.

— —

ಷೇರು ಬೆಲೆ ಇಳಿತಾಯ

ಬೊಂಬಾಯಿ ಜೂ 4— ಭಾರತದ ವಿಭಜನೆ ವಿಚಾರ ಹೊರಬಿದ್ದುದು ಬೊಂಬಾಯಿ ಷೇರು ಮಾರ್ಕಟ್ಟಿನಲ್ಲಿ ಅನೇಕ ಸಂಸ್ಥೆಗಳ ಷೇರಿನ ಬೆಲೆ ಇಳಿತಾಯವಾಗಿದೆ.

ಬರ್ಮಾದಲ್ಲಿ ದಂಗೆ

ರಂಗೂನ್ ಜೂ 3— ಅರಕಾನ್‌ನಲ್ಲಿ ಪೂರ್ಣ ದಂಗೆ ಎದ್ದಿದೆ. ಅದನ್ನು ಅಡಗಿಸಲು 7 ಸಾವಿರ ಭಾರತ ಸೈನಿಕರು ಕಾರ್ಯತತ್ಪರರಾಗಿದ್ದಾರೆ.

ಅಂತರ್ಜಾತೀಯ ವಿವಾಹ ಮಸೂದೆಯನ್ನು ಎದುರಿಸಿರಿ!

ಲೇ:— ರಾಜಾ ಎಸ್. ಗುರುರಾಜಾ ಚಾರ್ಯ, ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಶ್ರೀ ಗೋಪಾಲಸ್ವಾಮ್ಯಂಗಾರ್ಯರು ಅಸೆಂಬ್ಲಿಯಲ್ಲಿ ಅಂತರ್ಜಾತೀಯ ವಿವಾಹ ಮಸೂದೆಯನ್ನು ಮಂಡಿಸಿರುವುದು ನೋಡಿ ಎಲ್ಲ ಹಿಂದೂಗಳಿಗೂ ಸಿಡಿಲೆರಗಿದಂತಾಗಿದೆ. ಈ ಮಸೂದೆಯಿಂದ ನಮ್ಮ ಹಿಂದೂ ಮತದ ಮೇಲೆ ದೊಡ್ಡ ದುಷ್ಪರಿಣಾಮವಾಗುವುದಂಲ್ಲಿ ಸಂದೇಹವಿಲ್ಲ. ಈ ವಿವಾಹ ಪದ್ಧತಿಯು ನಾಲ್ಕು ವಿಧವಾಗಿ (ಸಾಮಾನ್ಯವಾಗಿ ಹೇಳುವುದಾದರೆ) ಹಿಂದೂಗಳಿಂದ ನಿಂದ್ಯವಾಗಿದೆ. 1) ನಮ್ಮ ಧರ್ಮ ಶಾಸ್ತ್ರಗಳಲ್ಲಿ ಹಿಂದೂ ವಿವಾಹಗಳನ್ನ ನಿರೂಪಿಸುವಾಗ ಸವರ್ಣ, ಅನುಲೋಮ, ಪ್ರತಿಲೋಮ ವಿವಾಹಗಳನ್ನು ಪ್ರತಿಪಾದಿಸಿದ್ದಾರೆ. ಇದರಲ್ಲಿ ಸವರ್ಣ ವಿವಾಹವೇ ನಮ್ಮ ಹಿಂದೂ ಮತದಲ್ಲಿ ನಡೆದು ಬಂದಿದೆ. 'ಸವರ್ಣೇಭ್ಯಸ್ಸವರ್ಣಾಸು' ಎಂಬ ಯಾಜ್ಞವಲ್ಕ್ಯ ಸ್ಮೃತ್ಯಾಚಾರದಿಂದ ಸವರ್ಣ ವಿವಾಹವೇ (ಅಂದರೆ ಆಯಾ ಜಾತೀಯರೊಡನೆ ವಿವಾಹ) ಶ್ರೇಷ್ಠವಾದುದು ಮತ್ತು ಕರ್ತವ್ಯವೆಂಬ ವಿಚಾರವು ತಿಳಿದು ಬರುತ್ತೆ. 'ಅನುಲೋಮಾನಾಂ ಸವೇದಾಧ್ಯಯನಂ ..... ಉಪನಯನ ಮಾಪಿ ತೂಷ್ಣೀಮೇವ' (ಸುಸ್ಥರಿಭಾಷ್ಯ) ಎಂಬ ಪ್ರಮಾಣ ವಿರುವುದರಿಂದಲೂ, 'ಪ್ರತಿಲೋಮ ಮತ್ತು ಧರ್ಮ ಹೀನ' ಎಂತ ವಚನವಿರುವುದರಿಂದಲೂ, ಅಲ್ಲದೆ ಮನು, ಗೌತಮಾದಿ ಧರ್ಮಶಾಸ್ತ್ರಕಾರರು ಅನುಲೋಮ, ಪ್ರತಿಲೋಮ ವಿವಾಹಗಳು ಆಚರಣೀಯವಲ್ಲವೆಂದು ಖಂಡಿಸಿರುವುದರಿಂದಲೂ ಈ ವಿವಾಹ ಮಸೂದೆಯು ಹಿಂದೂಗಳಿಗೆ ಯುಕ್ತವಾದುದಲ್ಲ 2) ನಮ್ಮ ಪ್ರಾಚೀನ ಸಂಸ್ಕೃತಿಯ ಇತಿಹಾಸವನ್ನವಲೋಕಿಸಿದರೆ ಈ ವಿಧವಾದ ವಿಶ್ರ ವಿವಾಹವು ಬಹುಶಃ ಕಂಡು ಬಂದಿಲ್ಲ. ಪ್ರತ್ಯುತ ನಿಂದ್ಯವೆಂದೂ ಸಂಸ್ಕೃತಿನಾಶಕವೆಂದೂ ತಿಳಿದು ಬರುತ್ತದೆಯಾಗಿ ನಮ್ಮ ಸುಸ್ಕೃತಿಗೆ ಕಳಂಕ ತರುವ ಈ ಮಸೂದೆಯನ್ನು ಎಲ್ಲರೂ ವಿರೋಧಿಸಬೇಕು. 3) ಭಾರತದ (ಸದ್ಯದಲ್ಲಿ ಮೈಸೂರಿನ) ಅವ ಹಿಂದೂವಿಗೂ ಇದು ಅಭಿಪ್ಸೇತವಲ್ಲ ಹಿಂದೂಗಳಲ್ಲಿ ಅನೇಕ ಪಂಗಡ ಉಪಪಂಗಡಗಳಿವೆ. ಅಷ್ಟೇಕೆ ಒಂದೇ ಕೋಮಿಗೆ

ಹೇಳಿದವುಲ್ಲೇ ಅನೇಕರು ತಮ್ಮ ತಮ್ಮ ಜಾತಿಯುವರಿಗೇ ಹೆಣ್ಣು ಕೊಟ್ಟು ತರುವ ಪದ್ಧತಿ ಇದೆ. ಬೇರೆಯುವರಿಗೆ ಕೊಡುವುದಿಲ್ಲ. ಇಂತಿರಲು ಜಾತಿಭೇದ ನಾಶಕವಾದ ಈ ವಿವಾಹವು ಹಿಂದೂಗಳಿಗಿಷ್ಟವಾದೀತೇ ? ಇದರಿಂದ ಹಿಂದೂಮತಕ್ಕೆ ಭಂಗ ಬರುತ್ತದೆಯಾಗಿ ಇದು ತ್ಯಾಜ್ಯವಾದುದು. 4) ಪಾಶ್ಚಾತ್ಯರಲ್ಲಿ ಜಾತಿಯತೆಗೆ ಜೆಲೆ ಇಲ್ಲ. ನೀತಿ, ಪದ್ಧತಿಗಳೆಲ್ಲವಾದುದರಿಂದ ಈ ವಿಧವಾದ ವಿವಾಹಗಳು ಅಲ್ಲಿ ಹೇರಳವಾಗಿ ನಡೆಯುತ್ತೆ. ಇದೇ ಅವರ ಸಂಸ್ಕೃತಿ ಎನಿಸಿದೆ. ಹೀದೂಗಳಾದ ನಾವು ಪಾಶ್ಚಾತ್ಯರನ್ನು ಈ ವಿಧವಾಗಿ ಅನುಸರಿಸಿದಲ್ಲಿ ನಮ್ಮ ಮೇಲೆ ಪಾಶ್ಚಾತ್ಯರ ಪ್ರಭುತ್ವ ಪ್ರಭಾವಗಳು ಹೆಚ್ಚುವುದಲ್ಲದೇ ದೇಶದ ಸಂಸ್ಕೃತಿಗೆ ಅವಮಾನ ಮಾಡಿ ದೇಶದ್ರೋಹಿಗಳಾಗಬೇಕಾಗುತ್ತದೆ ಮತ್ತು ಪರಾನುಕರಣ ತೀಲರೆಂಬ ಅಪಕೀರ್ತಿಗೆ ಭಾಗಿಗಳಾಗಬೇಕಾಗುತ್ತದೆಯಾಗಿ ಈ ವಿವಾಹವು ಈ ನಾಲ್ಕು ರೀತಿ ಇಂದಲೂ ಯೋಗ್ಯವಲ್ಲ ! ಇದರಿಂದ ಭಾರತದ ಅಥವಾ ಹಿಂದೂಗಳ ಉದ್ಧಾರವಾಗುತ್ತದೆಂದು ಯಾರಾದರೂ ತಿಳಿದಿದ್ದರೆ ಅದು ಭ್ರಾಂತೀಯೇ ಸೈ ! ನಮ್ಮ ವೈಸೂರಿನ ಅರಸರು ವಿವೇಚನಾ ಪೂರ್ತ ಆಡಳಿತದಲ್ಲಿ ನಮ್ಮ ಧರ್ಮ ಮತ್ತು ಸಂಸ್ಕೃತಿಗೆ ಕಳಂಕ ತರುವ ಯಾವ ಕಾರ್ಯಗಳೂ ಈವರೆಗೂ ಆಗಿಲ್ಲ. ಈಗ ಶ್ರೀ ಗೋಪಾಲಸ್ವಾಮಯ್ಯಂಗಾರ್ಯರು ಹಿಂದೂತ್ವವನ್ನೆಲಿಕೂಡಲು ಸಿದ್ಧರಾದದ್ದು ನಿಜವಾಗಿಯೂ ವಿಷಾದಾಸ್ಪದ. ಇದು ಹಿಂದೂಗಳೆಂದು ಹೇಳಿಕೊಳ್ಳುವವರ ಲಕ್ಷಣವಲ್ಲ ! ಶ್ರೀಯುತರು ಈ ಮಸೂದೆಯನ್ನು ಪಾಪು ಕೊಳ್ಳುವುದರ ಮೂಲಕ ತನ್ನ ಪಾಪದ ಪ್ರಾಯಶ್ಚಿತ್ತ ಮಾಡಿಕೊಳ್ಳಲಿ !! ನಾವು ಜನರಿಂದ ಚುನಾಯಿತರಾದ ಪ್ರಜಾ ಪ್ರತಿನಿಧಿ ಸಭಾ ಸದಸ್ಯರನ್ನೂ, ಸಮಿಲ ಹಿಂದೂಗಳನ್ನೂ ಪ್ರಾರ್ಥಿಸುವುದೇನೆಂದರೆ — 'ಹಿಂದೂ ಮತಕ್ಕೆ ಕಠಾರ ಪ್ರಾಯವಾದ ಈ ಕಾನೂನನ್ನು ತೀವ್ರವಾಗಿ ವಿರೋಧಿಸಿ, ಪಾಸಾಗದೊಡಬೇಡಿಂ'ಈ ಮನವಿಯನ್ನು ಸರ್ವರೂ ಮನ್ನಿಸುವರೆಂದು ನಂಬಿದ್ದೇವೆ. ಜಾತಿಯಲ್ಲಿ ನಂಬಿಕೆಯಿಲ್ಲದ ನೀತಿ ತಿಳಿಯದ ಸುಧಾರಕರೆನಿಸುವವರ ಸಲುವ್ಕಾಗಿ (ಬರೆ ವಿಧದಿಂದವರು ವಿವಾಹವಾಗಲು ಸಾಧ್ಯವಿದ್ದರೂ) ಎಲ್ಲ ಹಿಂದುಗಳ ಮೇಲೆ ವಿದ್ಧವಾಗುವ ಕಾನೂನು ರಚಿಸುವುದು ಅನ್ಯಾಯ ಮತ್ತು ಮಹಾಪರಾಧ.

ತಾ|| 27-5-47 ರಲ್ಲಿ ಮೈಸೂರಿನಲ್ಲಿ ನಮ್ಮ ಸಂಘದ ಆಶ್ರಯದಲ್ಲಿ ಹಿಂದೂಗಳ ಮಹಾ ಸಭೆ ಜರುಗಿ ಈ ಕಾನೂನನ್ನು ವಿರೋಧಿಸಿ ತಾವು ಪಾಸು ಮಾಡಿದಂತೆ ಎಲ್ಲ ಹಿಂದೂಗಳೂ ಪ್ರತಿಯೊಂದು ಗ್ರಾಮದಲ್ಲೂ ಸಭೆ ಸೇರಿ ಇದಕ್ಕೆ ವಿರೋಧ ಸೂಚಿಸಬೇಕು ಮತ್ತು ತಠಾವು ಮಾಡಿ ಸರ್ಕಾರಕ್ಕೆ ಕಳಿಸಿಕೊಡಬೇಕು. ಕೊನೆಯದಾಗಿ ಎಲ್ಲಾ ಹಿಂದೂಗಳೂ ತಮ್ಮ ಪ್ರಾಚೀನ ಪದ್ಧತಿ ಧರ್ಮ ರಕ್ಷಣೆಗಾಗಿ ಮುಸ್ಲಿಗ್ಗಬೇಕೆಂದೂ, ಇದಕ್ಕಾಗಿ ವೈಸೂರಿನಲ್ಲೇ ಏಕೆ ಅಖಿಲ ಕರ್ನಾಟಕದಲೆಲ್ಲಾ ದುಡಿಯುತ್ತಿರುವ ನಮ್ಮ ಸಂಘಕ್ಕೆ ಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇವೆ

ಹಿಂದೂ ಧರ್ಮಕ್ಕೆ ಜಯವಾಗಲಿ !

ಮಹಾಜನರ ಕೋರಿಕೆಯಂತೆ ಪ್ರತಿದಿನ ೩-೩೦ ಕ್ಕೆ ಮ್ಯಾಟ್ನಿ

.... ವುಡ್‌ಲ್ಯಾಂಡ್ಸ್ ಮೈಸೂರು ...

ತಾ|| 1-6-47 ರಿಂದ ಕಿಕ್ಕಿರಿದ ನೇ 5 ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು
* ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

At Opera

7 ನೇ ವಾರ

ಟಿ. ಎಸ್. ಬಾಲಯ್ಯ,
ತವನುಣಿದೇವಿ, ವಸಂತಿ
ರಾಮುಚಂದ್ರ ನಟಿಸಿರುವ

ಗಾ ಜ ಕು ಮಾ ರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಜಾಯಿಲೆ ಒರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

Edited, Printed and Published by M. S Krishna Rao at the Satyavadi Press Chamaraj Agrahar, Mysore.